POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 28.12.2025

# ಮೊದಲ ಚಿತ್ರದಲ್ಲೇ ಜಾಕ್‌ಪಾಟ್ ಹೊಡೆದ ಅರ್ಜುನ್ ಜನ್ಯ!

ಕನ್ನಡದ ಮಟ್ಟಿಗೆ ಇತ್ತೀಚಿನ ದಿನಗಳಲ್ಲಿ ಸೂಪರ್‌ಸ್ಟಾರ್ ಎನಿಸಿಕೊಂಡವರು ಕಂಟೆಂಟ್ ಸಿನಿಮಾಗಳನ್ನು ಮಾಡಿದ್ದು ಬಹಳ ವಿರಳ. ಮಲಯಾಳಂನ ಸ್ಟಾರ್ ನಟರಂತೆ ಕನ್ನಡದಲ್ಲಿಯೂ ಸ್ಟಾರ್‌ಗಳು ಸಿದ್ಧಸೂತ್ರದ ಸಿನಿಮಾಗಳನ್ನು ಬಿಟ್ಟು ಕಥಾ ಪ್ರಧಾನ ಚಿತ್ರಗಳನ್ನು ಮಾಡಬೇಕೆಂಬ ಕೂಗು ಹೆಚ್ಚಾಗಿತ್ತು. ಆ ಕೊರತೆಯನ್ನು ನೀಗಿಸುವ ಚಿತ್ರ '45'. ಹಾಗೆ ನೋಡಿದರೆ ಈ ಚಿತ್ರದಲ್ಲಿ ಉಪೇಂದ್ರ, ಖಳನಾಯಕ. ಶಿವರಾಜ್‌ಕುಮಾರ್ ಬರುವುದೇ ದ್ವಿತೀಯಾರ್ಧದಲ್ಲಿ. ರಾಜ್ ಬಿ. ಶೆಟ್ಟಿಯದ್ದು ಸಾಮಾನ್ಯರಲ್ಲಿ ಸಾಮಾನ್ಯ ಎಂಬಂಥ ಪಾತ್ರ. ಇಷ್ಟಾಗಿಯೂ ಪಾತ್ರವರ್ಗ ಪರಿಪೂರ್ಣ ಎಂಬಂತಿದೆ. ಎಲ್ಲ ಮುಖ್ಯ ಕಲಾವಿದರು ತಮ್ಮ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿ ಸಿನಿಮಾವನ್ನು ದಡ ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನಾಯಕ ಖಳನಾಯಕನನ್ನು ಸಂಹರಿಸಿ ಅಂತಿಮವಾಗಿ ಸತ್ಯಕ್ಕೆ, ನ್ಯಾಯಕ್ಕೆ ಜಯ ಸಿಗುತ್ತದೆ ಎಂಬುದು ಬಹುತೇಕ ಎಲ್ಲ ಮಾಸ್ ಸಿನಿಮಾಗಳಲ್ಲಿನ ಒಟ್ಟಾರೆ ಕಥೆ. ಅಸುರರ ವಿರುದ್ಧ ಸುರರ ಯುದ್ಧ, ಕೆಡಕಿನ ವಿರುದ್ಧ ಒಳಿತಿನ ಕಾದಾಟ, ಸುಳ್ಳಿನ ವಿರುದ್ಧ ಸತ್ಯದ ಹೋರಾಟ... ಇದರ ಅಂತಿಮ ಫಲಿತಾಂಶ ಎಲ್ಲರಿಗೂ ತಿಳಿದಿರುತ್ತದೆ. ಆ ಗೆಲುವು ಹೇಗೆ ಸಿಗುತ್ತದೆ ಎಂಬುದೇ ಈ ಚಿತ್ರದ ಒನ್ ಲೈನ್ ಸಾರಾಂಶ. ಅದನ್ನ ಗರುಡ ಪುರಾಣದ ಹಿನ್ನಲೆಯಲ್ಲಿ ಹೇಳಿರುವುದು ಮತ್ತೊಂದು ವಿಶೇಷ. ಈ ರೀತಿಯ ವಿಷಯಗಳಲ್ಲಿ ಕಥೆಗಿಂತ ಚಿತ್ರಕಥೆಯೇ ಮುಖ್ಯ.

ಸಾವಿನ ಅಧಿಪತಿ ಯಮನ ವಿರುದ್ಧ ಸಶ್ಮಾನದ ಅಧಿಪತಿ ಶಿವನ ಯುದ್ಧ ಎಂಬುದು '45' ಚಿತ್ರದ ಕಥೆ. ಅದು ಏಕೆ, ಹೇಗೆ ಮತ್ತು ಎಲ್ಲಿ ಎಂಬುದೇ ಚಿತ್ರಕಥೆ. ಗಮನ ಸೆಳೆಯುವ ದೃಶ್ಯ ವೈಭವದೊಂದಿಗೆ ಸಾಮಾಜಿಕ ಕಳಕಳಿಯ ಸಂದೇಶವನ್ನು ದಾಟಿಸುವಲ್ಲಿ ಅರ್ಜುನ್ ಜನ್ಯ ಚೊಚ್ಚಲ ಪ್ರಯತ್ನದಲ್ಲಿಯೇ ಯಶಸ್ವಿಯಾಗಿದ್ದಾರೆ.



ಸಾಮಾನ್ಯ ಸಾಫ್ಟ್‌ವೇರ್ ಉದ್ಯೋಗಿ ವಿನಯ್ ಮೊಬೈಲ್‌ನಲ್ಲಿ ಮಾತಾಡಿಕೊಂಡು ದ್ವಿಚಕ್ರ ವಾಹನ ಓಡಿಸುತ್ತ ಅಪಘಾತದಲ್ಲಿ ನಾಯಿಯನ್ನು ಸಾಯಿಸುತ್ತಾನೆ. ಕೊನೆಗೆ ತಾನೂ ಅಪಘಾತದಲ್ಲಿಯೇ ಸಾಯುತ್ತಾನೆ. ಸತ್ತ ವಿನಯ್ ಬದುಕಿದ್ದೇನೆಂಬ ಭ್ರಮೆಯಲ್ಲಿಯೇ ಚಿತ್ರ ಪ್ರಾರಂಭವಾಗುತ್ತದೆ. ಈ ನಾಯಿಯನ್ನು ತಾಯಿಯೆಂದು ಭಾವಿಸುವ ರಾಯಪ್ಪ ವಿನಯ್ ಪಾಲಿಗೆ ಯಮನಾಗಿ ಬಂದು ಕಾಡಲು ಶುರು ಮಾಡುತ್ತಾನೆ. ವಿನಯ್‌ಗೆ ಭೂಮಿಯ ಮೇಲೆ ಬದುಕುಳಿಯಲು ರಾಯಪ್ಪ 45 ದಿನಗಳ ಗಡುವು ನೀಡುತ್ತಾನೆ. ಆ ಅವಧಿಯಲ್ಲಿ ನಡೆಯುವ ಒಂದಷ್ಟು ಸನ್ನಿವೇಶಗಳೇ ಸಿನಿಮಾವಾಗಿದೆ.

ಕಥೆ, ಚಿತ್ರಕಥೆಗಿಂತಲೂ ಹೆಚ್ಚು ಗಮನ ಸೆಳೆಯುವುದು ಚಿತ್ರದ ಮೇಕಿಂಗ್. ಪ್ರತಿ ದೃಶ್ಯವೂ ಅದ್ದೂರಿಯಾಗಿದೆ. ಹಲವು ಕಡೆ ಗ್ರಾಫಿಕ್ಸ್‌ನಲ್ಲಿ ಕನ್ನಡ ಸಿನಿಮಾರಂಗಕ್ಕೆ ಹೊಸತು ಎಂಬಂಥ ಲೋಕ ಸೃಷ್ಟಿಸಲಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಪಾತ್ರವರ್ಗವೇ ಸಿನಿಮಾದ ದೊಡ್ಡ ಗೆಲುವು. ರಾಯಪ್ಪನಾಗಿ ಉಪೇಂದ್ರ, ಅವರ ಗೆಟಪ್, ಹಾವಭಾವ ಮುದ ನೀಡುತ್ತದೆ. ಯಮನ ಸ್ವರೂಪಿ ರಾಯಪ್ಪನಾಗಿ ಉಪೇಂದ್ರ, ಅಕ್ಷರಶಃ ಸಿನಿಮಾವನ್ನು ಹೆಗಲ ಮೇಲೆ ಹೊತ್ತುಕೊಂಡು ಸಾಗಿದ್ದಾರೆ. ಆ ಪಾತ್ರಕ್ಕೆ ತದ್ವಿರುದ್ಧವಾಗಿ ಎಲ್ಲ ಸನ್ನಿವೇಶಗಳನ್ನು ಶಾಂತವಾಗಿ ನಿಭಾಯಿಸುವ ಶಿವಪ್ಪನಾಗಿ ಶಿವರಾಜ್ ಕುಮಾರ್ ಮತ್ತೊಂದು ಹೆಗಲು ನೀಡಿದ್ದಾರೆ.




ಸಾಮಾನ್ಯ ವ್ಯಕ್ತಿಯಾಗಿ ಅಲ್ಲಲ್ಲಿ ಸಹಜ ಹಾಸ್ಯದಿಂದ ರಾಜ್ ಬಿ. ಶೆಟ್ಟಿ ನಗಿಸುತ್ತಾರೆ. ಯಮನ ಬಲಗೈ ಬಂಟನಾಗಿ ಕುಳ್ಳ ಜಾಫರ್ ಸಾದಿಕ್ ಗಮನ ಸೆಳೆಯುತ್ತಾರೆ. ಕ್ಲೈಮಾಕ್ಸ್ ನಲ್ಲಂತು ಶಿವಣ್ಣ ಸಾಕ್ಷಾತ್ ಪರಶಿವನಾಗಿ ರುದ್ರ ತಾಂಡವ ಆಡುತ್ತಾರೆ. ಈ ದೃಶ್ಯ ವೈಭವ ಜಾತ್ರೋತ್ಸವ ಗಳಲ್ಲಿ ಅಂತಿಮವಾಗಿ ಮತಾಪು ಸಿಡಿಸಿ ಸಂಭ್ರಮಿಸುತ್ತಾರಲ್ಲ ಹಾಗಿದೆ! ☯

# ನಟಿ ನಂದಿನಿ ಆತ್ಮಹತ್ಯೆ ಮಾಡಿಕೊಂಡಿದ್ದೇಕೆ?!



ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ಕನ್ನಡ, ತೆಲುಗು ಮತ್ತು ತಮಿಳು ಕಿರುತರೆಯಲ್ಲಿ ಮಿಂಚುತ್ತಿದ್ದ ನಟಿ ನಂದಿನಿ ಅವರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ವೃತ್ತಿಜೀವನದಲ್ಲಿ ಸಕ್ರಿಯರಾಗಿದ್ದ ನಟಿ ಇಂತಹ ಕಠಿಣ ನಿರ್ಧಾರ ತೆಗೆದುಕೊಳ್ಳಲು ಕಾರಣವೇನು ಎಂಬುದು ಸದ್ಯಕ್ಕೆ ನಿಗೂಢವಾಗಿದೆ! ಮನೆಯಲ್ಲಿ ಸರ್ಕಾರಿ ಕೆಲಸ ಮಾಡಲು ಒತ್ತಾಯಿಸುತ್ತಿದ್ದ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಡೆತ್ ನೋಟ್‌ನಲ್ಲಿ ನಂದಿನಿ ಉಲ್ಲೇಖಿಸಿದ್ದಾರೆ.

ಕನ್ನಡದ 'ನೀನಾದೆನಾ' ಮತ್ತು 'ಸಂಘರ್ಷ' ಧಾರಾವಾಹಿಗಳಲ್ಲಿ ನಟಿಸಿದ್ದ ನಂದಿನಿಗೆ ತಮಿಳು, ತೆಲುಗು ಮಂದಿಯು ಫ್ಯಾನ್ಸ್ ಆಗಿದ್ದರು. ತಮಿಳು ಕಲೈಗ್ನರ್ ಟಿವಿಯಲ್ಲಿ ಪ್ರಸಾರವಾಗುತ್ತಿರುವ 'ಗೌರಿ' ಧಾರಾವಾಹಿಯಲ್ಲಿ ನಾಯಕಿಯಾಗಿ ನಟಿಸುತ್ತಿದ್ದ ಕಿರುತರೆ ನಟಿ ನಂದಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಾವಿಗೂ ಮುನ್ನ ನಟಿ ಬರೆದಿದ್ದಾರೆ ಎನ್ನಲಾದ ಡೆತ್‌ನೋಟ್ ಲಭ್ಯವಾಗಿದ್ದು, ಅದರಲ್ಲಿ ಮದುವೆಯ ಒತ್ತಡದ ಬಗ್ಗೆ, ನಟನೆ ಬಿಟ್ಟು ಸರ್ಕಾರಿ ಕೆಲಸ ಮಾಡುವ ಬಗ್ಗೆ ಉಲ್ಲೇಖಿಸಿದ್ದಾರೆ ಎನ್ನಲಾಗಿದೆ.

ನಂದಿನಿ ಬಳ್ಳಾರಿ ಜಿಲ್ಲೆಯ ಕೊಟ್ಟೂರು ತಾಲೂಕಿನವರು. 2025ರ ಆಗಸ್ಟ್‌ನಿಂದ ಮೈಲಸಂದ್ರದ ಪಿಜಿಯಲ್ಲಿ ವಾಸಿಸುತ್ತಿದ್ದರು. ಮೊನ್ನೆ ಭಾನುವಾರ ತನ್ನ ಗೆಳೆಯ ಪುನೀತ್ ಎಂಬುವರ ಮನೆಗೆ ಹೋಗಿ ರಾತ್ರಿ 11.20ರ ಸುಮಾರಿಗೆ ವಾಪಸ್ ಬಂದಿದ್ದರು. ಪುನಃ ಪುನೀತ್ ಕರೆ ಮಾಡಿದಾಗ ಸ್ವೀಕರಿಸಿರಲಿಲ್ಲ. ಇದರಿಂದ ಅನುಮಾನಗೊಂಡ ಪುನೀತ್, ಪಿಜಿ ಮ್ಯಾನೇಜರ್‌ಗೆ ತಿಳಿಸಿದ್ದರು. ಪಿಜಿ ಮ್ಯಾನೇಜರ್ ಹಾಗೂ ಸಿಬ್ಬಂದಿ ನಂದಿನಿ ಕೊಠಡಿ ಬಳಿ ತೆರಳಿ ನೋಡಿದಾಗ ವೇಲ್‌ನಿಂದ ಕಿಟಕಿ ಸರಳಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡು ಬಂದಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

**ಡೆತ್ ನೋಟ್ ಸೀಕ್ರೆಟ್?**

ನಂದಿನಿ ಅವರು ಡೈರಿಯಲ್ಲಿ ಡೆತ್‌ನೋಟ್ ಬರೆದಿರುವುದು ಕಂಡು ಬಂದಿದೆ. ''ನನಗೆ ಸರಕಾರಿ ಕೆಲಸ ಇಷ್ಟವಿಲ್ಲ. ನಟನೆ ಬಗ್ಗೆ ಆಸಕ್ತಿಯಿದ್ದು, ಅದರಲ್ಲಿಯೇ ಮುಂದುವರಿಯಬೇಕು. ಆದರೆ, ಮನೆಯಲ್ಲಿ ಇದಕ್ಕೆ ಒಪ್ಪುತ್ತಿಲ್ಲ'' ಎಂದು ಬರೆದಿರುವುದಾಗಿ ಪೊಲೀಸರು ಹೇಳಿದ್ದಾರೆ.

**ಅನುಕಂಪದ ಉದ್ಯೋಗ!**

ನಂದಿನಿ ಅವರ ತಾಯಿ ಬಸವರಾಜೇಶ್ವರಿ ಸರಕಾರಿ ಶಾಲಾ ಶಿಕ್ಷಕಿಯಾಗಿದ್ದಾರೆ. ಅವರು ಮಗಳ ಸಾವಿನ ಕುರಿತು ತಮ್ಮ ಹೇಳಿಕೆ ದಾಖಲಿಸಿದ್ದಾರೆ. 'ಸರಕಾರಿ ಶಿಕ್ಷಕರಾಗಿದ್ದ ಪತಿ ಎಸ್. ಮಹಾಬಲೇಶ್ವರ ಅವರು 2021ರಲ್ಲಿ ಮೃತಪಟ್ಟಿದ್ದರು. ಹೀಗಾಗಿ, 2023ರಲ್ಲಿ ಮಗಳು ನಂದಿನಿಗೆ ಅನುಕಂಪದ ಆಧಾರದಲ್ಲಿ ಸರಕಾರಿ ಕೆಲಸ ಸಿಕ್ಕಿತ್ತು. ಆದರೆ, ಕೆಲಸಕ್ಕೆ ಹೋಗದ ನಂದಿನಿ, ನಟನಾ ಕ್ಷೇತ್ರದಲ್ಲಿಯೇ ಮುಂದುವರಿಯುವುದಾಗಿ ಹಠ ಮಾಡಿ ಬೆಂಗಳೂರಿಗೆ ಬಂದಿದ್ದಳು' ಎಂದು ತಿಳಿಸಿದ್ದಾರೆ. 'ಜತೆಗೆ, ಮಗಳ ಸಾವಿನ ಬಗ್ಗೆ ಯಾವುದೇ ಅನುಮಾನವಿಲ್ಲ ಎಂದಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ. ಸದ್ಯ ನಂದಿನಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಅಸಹಜ ಸಾವು ಪ್ರಕರಣ ದಾಖಲಿಸಿ ತನಿಖೆ ಮುಂದುವರಿಸಲಾಗಿದೆ.

**ಒಳ್ಳೆಯ ಭವಿಷ್ಯವಿತ್ತು!**

ನೀನಾದೆನಾ, ಜೀವ ಹೂವಾಗಿದೆ, ಸಂಘರ್ಷ, ಮಧುಮಗಳು ಸೀರಿಯಲ್‌ನಲ್ಲಿ ನಟಿಸಿದ್ದರು. ತಮಿಳಿನ 'ಗೌರಿ' ಧಾರಾವಾಹಿಯ ಮೂಲಕ ಜನರಿಗೆ ಇನ್ನಷ್ಟು ಹತ್ತಿರವಾಗಿದ್ದರು ನಂದಿನಿ. ಈ ಧಾರವಾಯಿಯಲ್ಲಿ ನಂದಿನಿ ಅವರು ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದರು. ಇದರಲ್ಲಿ ಅವರು ಕನಕ ಮತ್ತು ದುರ್ಗ ಎಂಬ ಎರಡು ಸವಾಲಿನ ಪಾತ್ರಗಳನ್ನು ನಿರ್ವಹಿಸಿ ಜನರ ಮೆಚ್ಚುಗೆ ಗಳಿಸಿದ್ದರು. ಒಟ್ಟಾರೆ, ಮುದ್ದು ಮುಖದ ಚೆಲುವೆ ನಂದಿನಿಗೆ ನಟನಾ ರಂಗದಲ್ಲಿ ಒಳ್ಳೆಯ ಭವಿಷ್ಯವಿತ್ತು. ಆದರೆ, ಅವರ ತಾಯಿಗೆ ಬಣ್ಣದ ಲೋಕ ಇಷ್ಟವಿರಲಿಲ್ಲ. ಮಗಳು ತಮ್ಮ ಹಾಗೆ ಶಿಕ್ಷಕಿಯಾಗಿ ಪಾಠ ಪ್ರವಚನ ಭೋಽಸಿಕೊಂಡು ಇರಬೇಕು ಎಂಬಾಸೆ ಇತ್ತು. ಮಗಳ ಆಸೆಗೆ ತಣ್ಣೀರು ಎರಚಲು ಹೋಗಿ... ಇಂಥ ಅನಾಹುತ ಸಂಭವಿಸಿದೆ!! ☯

Vol. 41 No. 30 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 cenewsreporter@gmail.com
http//policenews.news https://www.facebook.com/profile.php?id=61579674874846 ttps://www.instagram.com/police_news?igsh=MWJ6bHJwZDRmZDc1aQ==